ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎಂ. ರಘುಪತಿ (ವಿಮಾನಯಾನ), ಬಂದರು ಹಾಗೂ ಸಣ್ಣ ಕೈಗಾರಿಕೆಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಕಾಯಿದೆಯ ೬೧೯ (ಎ)ನೇ ಕಲಮಿನ ಮೇರೆಗೆ ಕರ್ನಾಟಕ ವಿಮಾನಯಾನ ಅಭಿವೃದ್ಧಿ ನಿಗಮದ ವಿಮಾನಯಾನ ೧೯೮೭-೮೮ನೇ ಸಾಲಿನ ಪ್ರಗತಿಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಶ್ರೀ ಕೆ. ಬಿ. ಕೋಳಿವಾಡ್ ಅವರ ಪರವಾಗಿ ಅವರ ಹೆಸರಿನ ಮುಂದಿರುವ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) ರಾಣೇಬೆನ್ನೂರು ತಾಲ್ಲೂಕಿನ ಮುದೇನೂರು ಗ್ರಾಮದ ಕುಡಿಯುವ ನೀರಿನ ಟ್ಯಾಂಕ್‌ನ್ನು ಓವರ್ ಟ್ಯಾಂಕ್ ಆಗಿ ಪರಿವರ್ತಿಸಲು ಮಂಜೂರಾತಿ ನೀಡುವ ಬಗ್ಗೆ ಮುದೇನೂರು ಗ್ರಾಮಸ್ಥರ ಅರ್ಜಿ ಹಾಗೂ

ಆ) ರಾಣೇಬೆನ್ನೂರಿನಿಂದ ಮುದೇನೂರು ಗ್ರಾಮಕ್ಕೆ ರಸ್ತೆಯು ಡಿಪೇರಿ ಬಗ್ಗೆ ಮುದೇನೂರು ಗ್ರಾಮಸ್ಥರ ಅರ್ಜಿಯನ್ನು ಸಭೆಗೆ ಒಪ್ಪಿಸುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಭೂ ನೀರಾವರಿಗಾಗಿ ನೀರೆತ್ತಲು ಅನುಮತಿಗಾಗಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಉಗಾರ್ ಬುದ್ರುಕ್ ನಲ್ಲಿರುವ ಉಗಾರ್‌ಬುದ್ರುಕ್ ಸೇಡಬಾಳ ಸಂಯುಕ್ತ ನೀರಾವರಿ ಯೋಜನೆಯ ಪ್ರಮೋಟರ್‌ರವರ ಅರ್ಜಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಯಿತು. ಇನ್ನು ಗಮನ ಸೆಳೆಯುವ ಸೂಚನೆಗಳು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಎಂ.ಡಿ. ಮೆಡಿಕಲ್ ಸೀಟ್ ಸ್ಕ್ಯಾಂಡಲ್ ಬಗ್ಗೆ ನೇಮಿಸಿದ ವಿಚಾರಣಾ ಆಯೋಗದ ಅಧ್ಯಕ್ಷರ ರಾಜೀನಾಮೆಯು ಕುರಿತು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಗಮನ ಸೆಳೆಯುವ ಸೂಚನೆಗೆ ಮುಂಚೆ ಎಂ.ಡಿ. ಸೀಟ್ ಹಗರಣದ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ಶ್ರೀಮಾನ್ ಪುಟ್ಟಸ್ವಾಮಿಯವರಿ ರೆಸಿಗ್ನೇಷನ್ ಕೊಟ್ಟ ಮೇಲೆ ಶ್ರೀಮಾನ್ ನಾರಾಯಣಕಾಮಾರ್ ಅವರನ್ನು ನೇಮಕಾತಿ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿನ್ನೆಯ ಉತ್ತರದಲ್ಲಿ ಇದನ್ನು ಹೇಳಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನೇ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲ. ಎರಡೂವರೆ ಲಕ್ಷ ರೂಪಾಯಿಗಳನ್ನು ಯಾರ್ಯಾರು ತೆಗೆದುಕೊಂಡಿದ್ದಾರೆ.....

SRI A. LAKSHMISAGAR.—It does not become a matter for an adjournment motion.

ಅಧ್ಯಕ್ಷರು.—ಇಲ್ಲಿ ಸ್ವಲ್ಪ ಕೇಳಿ. ನಿನ್ನೆ ಉತ್ತರವನ್ನು ಕ್ಲಿಯರ್ ಆಗಿ ಹೇಳಿದ್ದಾರೆ. ಅದನ್ನು ಆಗುವುದಿಲ್ಲವೆಂದು ನಾನು ರಿಜಕ್ಟ್ ಕೂಡ ಮಾಡಿದ್ದೇನೆ. ನೀವು ಬೇಕಾದರೆ ಕಾಲಿಂಗ್ ಅಟೆಷನ್ ನೋಟೀಸ್ ಕೊಡಿ.